## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

## ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** – 498/2025 **PW**–2

**ದಿಃ 06.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ವಕೀಲರಾದ ಶ್ರೀ ಟೆಂಗಿನಕಾಯಿರವರಿಂದಃ**

ನಾನು ಈ ಕೇಸನಲ್ಲಿ ಅರ್ಜಿದಾರ ಪರ ಸಾಕ್ಷಿದಾರನಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಸದರಿ ದಾಖಲೆಯನ್ನು ನಿಶಾನೆ ಪಿ 8 ಎಂದು,ನಿಶಾನೆ ಪಿ 8 ರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ 8(ಎ) ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀಮತಿ ವಿವಿಪಿ ರವರಿಂದ**

ನಾನು ಕಳೆದ ಮೂರು ವರ್ಷಗಳಿಂದ orthopaedic surgeon ಎಂದು ಕೆಲಸ ನಿರ್ವಹಿಸುತ್ತಿದ್ದೇನೆ. ನನ್ನ ಪ್ರಮಾಣ ಪತ್ರದಲ್ಲಿ ನಾನು ಕೇವಲ 1 ವರ್ಷದ ಹಿಂದೆ ಆದ ಅಪಘಾತದ ಗಾಯಗಳಿಗೆ ಸಂಬಂಧಿಸಿದಂತೆ ಅವರು ನನ್ನ ಬಳಿ ಬಂದಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ. ನಾನು ಕೊಟ್ಟಿರುವ ನಿಶಾನೆ ಪಿ 8 ಕ್ಕೂ, ಅರ್ಜಿದಾರರಿಗೂ ಮತ್ತು ನಾನು ಸಲ್ಲಿಸಿರುವ ಪ್ರಮಾಣ ಪತ್ರಕ್ಕೂ ಯಾವುದೇ ಸಂಬಂಧ ಇಲ್ಲವೆಂದರೆ ಸರಿಯಲ್ಲ. ಅವರು ಬರುವ 1 ವರ್ಷಗಳ ಹಿಂದೆ ನಾನು ಯಾವುದೇ ಚಿಕಿತ್ಸೆ ಕೊಟ್ಟಿಲ್ಲವೆಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ road traffic accident ಎಂದು ಹೇಳಿದ್ದು ಅದರ ಬಗ್ಗೆ ನನಗೆ ಮಾಹಿತಿ ಇಲ್ಲವೆಂದರೆ ಸರಿ. ದಿಃ04-03-2026



ರಂದು ಅರ್ಜಿದಾರರು ನನ್ನ ಬಳಿ ಕೇವಲ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಪಡೆಯಲು ಮಾತ್ರ ಬಂದಿದ್ದರು ಎಂದರೆ ಸಾಕ್ಷಿ ಸರಿಯಲ್ಲ consultation ಗಾಗಿ ಬಂದಿದ್ದರು ಎನ್ನುತ್ತಾರೆ. ನಾನು ಆ ದಿನ ಅರ್ಜಿದಾರರನ್ನು ಯಾವುದೇ ರೀತಿಯ ಪರೀಕ್ಷೆಗೆ ಒಳಪಡಿಸಿಲ್ಲ ಕೇವಲ ರೆಕಾರ್ಡ ಆಧಾರದ ಮೇಲೆ

ನಾನು ಅಂಗನ್ಯೂನತೆ ಮಾಪನ ಮಾಡಿರುತ್ತೇನೆಂದರೆ ಸರಿಯಲ್ಲ. ಅರ್ಜಿದಾರರು ನನ್ನ treatment ನಲ್ಲಿ ಮತ್ತು regular follow up ಬರುತ್ತಿದ್ದರೆಂದು ಹೇಳಿದ್ದು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ದಾಖಲೆ ಹಾಜರುಪಡಿಸಿಲ್ಲ ಆದರೆ treatment ಕೊಟ್ಟಿದ್ದೇನೆ ಎನ್ನುತ್ತಾರೆ. ಸದರಿ ಅರ್ಜಿದಾರರು ಎನು ಕೆಲಸ ಮಾಡುತ್ತಾರೆಂದು ಕೇಳಿದೀರಾ ಎಂದರೆ ಸಾಕ್ಷಿ ಕೇಳಿದ್ದೆ ಆದರೆ ನನ್ನ ಪ್ರಮಾಣ ಪತ್ರದಲ್ಲಾಗಲಿ ಅಥವಾ ಅಂಗನ್ಯೂನತೆ ಪ್ರಮಾಣ ಪತ್ರದಲ್ಲಾಗಲಿ ಅದನ್ನು ನಮೂದು ಮಾಡಿಲ್ಲವೆಂದರೆ ಸರಿ. ಅಂಗನ್ಯೂನತೆ ಅವರು ಎನು ಕೆಲಸ ಮಾಡುತ್ತಾರೆ ಅದರ ಮೇಲೆ ಅವಲಂಬಿತವಾಗಿರುತ್ತದೆ ಎಂದರೆ ಸರಿ. ಆ ಕಾರಣಕ್ಕೆ ನಾನು ಎಲ್ಲಿಯೂ ಕೂಡಾ ಎನು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿಲ್ಲ ಎಂದರೆ ಸಾಕ್ಷಿ ಹೇಳಿಲ್ಲ ಎನ್ನುತ್ತಾರೆ. ಅರ್ಜಿದಾರರ earning capacity increase ಆಗಿದೆ ಆದರು ಕೂಡಾ ನಾನು ಸುಳ್ಳು ಪ್ರಮಾಣ ಪತ್ರ ಕೊಟ್ಟಿರುತ್ತೇನೆಂದರೆ ಸರಿಯಲ್ಲ. ನಿಶಾನೆ ಪಿ 8 ನ್ನು ನೀಡುವ ಸಮಯದಲ್ಲಿ ನನಗೆ ಗಾಯದ ಪ್ರಮಾಣ ಪತ್ರವನ್ನು ಅವರು ನನಗೆ ಕೊಟ್ಟಿಲ್ಲ ಮತ್ತು ನಾನು ಅದನ್ನು ನೋಡಿಲ್ಲ. ನಿಶಾನೆ ಪಿ 4 ರ ಪ್ರಕಾರ ಗಾಯದ ಸಂಖ್ಯೆ 1 ಮತ್ತು 2 ತೀವ್ರ ಸ್ವರೂಪದ್ದು ಮತ್ತು ಗಾಯದ ಸಂಖ್ಯೆ 3 ಮತ್ತು 4 ಸಾಮಾನ್ಯ ಸ್ವರೂಪದ್ದು ಎಂದು ಹೇಳಿರುತ್ತಾರೆ ಅದೇ ರೀತಿ ಯಾವುದೇ fracture ಇಲ್ಲ ಎಂದು ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ಸದರಿಯವರಿಗೆ ಯಾವುದೇ ಶಾಶ್ವತವಾದ ಅಂಗನ್ಯೂನತೆ ಇಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ದಿಃ05–03–2026 ರಂದು ನಾನು ಎಕ್ಸರೆ ತೆಗೆದಿದ್ದೇನೆಂದು ಹೇಳಿದ್ದು ಅದರಲ್ಲಿ ಯಾವುದೇ ರೀತಿಯ ಅಂಗನ್ಯೂನತೆ ಇರಲಿಲ್ಲ ಆದರು ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಸಂಪೂರ್ಣ ದೇಹದ ಬಗ್ಗೆ  ಅಂಗನ್ಯೂನತೆ ನಮೂದು ಮಾಡಿಲ್ಲವೆಂದರೆ ಸರಿ. ನಾನು ಕೇವಲ ನಿಖರವಾದ ಅಂಗಕ್ಕೆ ಮಾತ್ರ ಅಂಗನ್ಯೂನತೆ ಕೊಟ್ಟಿರುತ್ತೇನೆಂದರೆ ಸರಿ. ಸದರಿ ಅಂಗನ್ಯೂನತೆಯನ್ನು ಸಂಪೂರ್ಣ ದೇಹಕ್ಕೆ ಹೋಲಿಸಿದರೆ ಅದು ಕಡಿಮೆ ಪ್ರಮಾಣ ಬರುತ್ತದೆ ಎಂದರೆ ಸರಿ. ನಾನು ಹೇಳಿರುವಂತೆ ಶೇಕಡಾ 15 ರಷ್ಟು ಅಂಗನ್ಯೂನತೆ ಬರುವುದಿಲ್ಲವೆಂದರೆ ಸರಿಯಲ್ಲ. ನಾನು ಹೇಳಿದ ಅಂಗನ್ಯೂನತೆಯಲ್ಲಿ pain component and foreigh body sensation  ಇವುಗಳೆಲ್ಲವು ಶೇಕಡಾ 15 ರಲ್ಲಿಯೆ ಸೇರಿಕೊಳ್ಳುತ್ತವೆ ಎಂದರೆ ಸರಿಯಲ್ಲ. ನಾನು ಸದರಿ guidelines ಸರಿಯಾಗಿ ಮೆಂಟನ್ ಮಾಡಿಲ್ಲವೆಂದರೆ ಸರಿಯಲ್ಲ. ಸದರಿ guidelines ನನ್ನು ನೀವು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅರ್ಜಿದಾರರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ